KACN030030392017

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ , ಚಾಮರಾಜನಗರ.**

ದಿನಾಂಕ 20ನೇ ಆಗಸ್ಟ್ 2026

**ಉಪಸ್ಥಿತರು**

**ಶ್ರೀಮತಿ ಸ್ಮಿತಾ ನಾಗಲಾಪೂರ,** ಬಿ.ಎ., ಎಲ್‌ಎಲ್.ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,

ಚಾಮರಾಜನಗರ.

**ದಂಡ ಪ್ರಕರಣ ಸಂಖ್ಯೆ 1241/2017**

**ಫಿರ್ಯಾದುದಾರರುಃ ರಾಜ್ಯದ ಪರ ಗ್ರಾಮಾಂತರ ಪೊಲೀಸ್ ಠಾಣೆ,**
**ಚಾಮರಾಜನಗರ.**
**(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**ವಿರುದ್ಧ**

**ಆರೋಪಿಗಳು**

1. **ಗಣೇಶ ,**
   ಬಿನ್ ಮಹದೇವನಾಯಕ , 24 ವರ್ಷ,
2. **ನಾಗೇಂದ್ರ ,**
   ಬಿನ್ ಮಹದೇವನಾಯಕ, 26 ವರ್ಷ,
   ಇಬ್ಬರ ವಾಸಃ ಬಿಸಲವಾಡಿ ಗ್ರಾಮ,
   ಚಾಮರಾಜನಗರ ತಾಲ್ಲೂಕು.

**(ಪ್ರತಿನಿಧಿಸಿದವರುಃ ಶ್ರೀ ಯು.ಎಂ.ಬಿ., ವಕೀಲರು)**

| | | |
|---|---|---|
| ಕೃತ್ಯ ನಡೆದ ದಿನಾಂಕ | : | 07.03.2017 |
| ಪ್ರಕರಣ ದಾಖಲಾದ ದಿನಾಂಕ | : | 08.03.2017 |
| ಸಿ.ಸಿ. ಪ್ರಕರಣ ದಾಖಲಾದ ದಿನಾಂಕ | : | 18.09.2017 |

| | | | | |
|---|---|---|---|---|
| ಸಾಕ್ಷ್ಯ ವಿಚಾರಣೆ ಪ್ರಾರಂಭವಾದ ದಿನಾಂಕ : | 02.08.2022 | | | |
| ವಿಚಾರಣೆ ಮುಕ್ತಾಯವಾದ ದಿನಾಂಕ : | 07.04.2026 | | | |
| ಆಪಾದಿಸಲ್ಪಟ್ಟ ಅಪರಾಧಗಳು : | ಭಾರತೀಯ ದಂಡ ಸಂಹಿತೆ ಕಲಂ.504, 324, 323, 506 ಸಹವಾಚಕ 34 | | | |
| ಪ್ರಕರಣ ಮುಕ್ತಾಯವಾದ ದಿನಾಂಕ : | **20.08.2026** | | | |
| ನ್ಯಾಯಾಧೀಶರ ಅಭಿಪ್ರಾಯ : | ದೋಷಮುಕ್ತ | | | |
| ಅವಧಿ : | ವರ್ಷ | ತಿಂಗಳು | ದಿನ | |
| | 08 | 11 | 02 | |

## : ತೀರ್ಪು :

ಚಾಮರಾಜನಗರದ ಗ್ರಾಮಾಂತರ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.504, 324, 323, 506 ಸಹವಾಚಕ 34 ರಡಿಯಲ್ಲಿ ಈ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯಂತೆ ಈ ಪ್ರಕರಣದ ಮುಖ್ಯ ಸಾರಾಂಶ ಈ ಕೆಳಕಂಡಂತೆ ಇದೆ:**

ದಿನಾಂಕ 07.03.2017ರಂದು ಬೆಳಿಗ್ಗೆ 11.45 ಗಂಟೆ ಸಮಯದಲ್ಲಿ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಬಿಸಲವಾಡಿ ಗ್ರಾಮದ ಎಲ್ಲೆಗೆ ಸೇರಿರುವ ಪಿರ್ಯಾದಿಯವರ ತಂದೆ ಸಿದ್ದನಾಯಕರವರ ಬಾಬ್ತು ಸರ್ವೆ ನಂ.260/1ರ ಬಾಬ್ತು ಜಮೀನಿನ ದಕ್ಷಿಣ ದಿಕ್ಕಿನ ಅಂಚಿನಲ್ಲಿರುವ ಟ್ರಾನ್ಸ್ ಫಾರಂ ಲೈಟ್ ಕಂಬದ ಹತ್ತಿರ ಆರೋಪಿಗಳು ಸಮಾನ ಉದ್ದೇಶದಿಂದ ಚಾಸಾ 1 ರವರ ಜಮೀನಿಗೆ ಪ್ರಾಣಿಗಳು ಒಳಗಡೆ ಬರುವುದನ್ನು ನಿಯಂತ್ರಿಸಲು ಹಾಕಿರುವ ತಂತಿ ಹಾಕಿ ನೆಟ್ಟಿರುವ ಗಳುಗಳನ್ನು ಮುರಿದು ಹಾಕುತ್ತಿದ್ದಾಗ, ಚಾಸಾ 1 ರವರು ಏಕೆ ನಮ್ಮ ಜಮೀನಿಗೆ ಹಾಕಿರುವ ಗಳುಗಳನ್ನು ಮುರಿದು ಹಾಕುತ್ತೀರ ಎಂದು

ಕೇಳಿದ್ದಕ್ಕೆ, 1ನೇ ಆರೋಪಿಯು ಚಾಸಾ 1 ರವರಿಗೆ ನೀನೇನು ಕೇಳುವುದು ಎಂದು ಪುನಃ ಗಳುಗಳನ್ನು ಮುರಿದು ಹಾಕುತ್ತಿದ್ದಾಗ ಚಾಸಾ 1 ರವರು ಅದನ್ನು ತಡೆಯಲು ಹೋದಾಗ 1ನೇ ಆರೋಪಿಯು ಚಾಸಾ 1 ರವರನ್ನು ಬಲವಾಗಿ ಕೆಳಗೆ ತಳ್ಳಿದಾಗ ಚಾಸಾ 1 ರವರು ಕೆಳಗೆ ಬಿದ್ದಾಗ 2ನೇ ಆರೋಪಿಯು ಅಲ್ಲೇ ಬಿದ್ದಿದ್ದ ಒಂದು ಗಳುವನ್ನು ತೆಗೆದುಕೊಂಡು ಚಾಸಾ 1 ರವರ ಮೈಕೈಗೆ ಹೊಡೆದು ಚಾಸಾ 1 ರವರಿಗೆ ಸಾಮಾನ್ಯ ಸ್ವರೂಪದ ಗಾಯಪಡಿಸಿ, ಕೊಲೆ ಬೆದರಿಕೆ ಹಾಕಿದ್ದು, ಅದರಂತೆ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.504, 324, 323, 506 ಸಹವಾಚಕ 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ.

**3.** ಆರೋಪಿಗಳ ವಿರುದ್ಧ ತನಿಖೆಯನ್ನು ಪೂರ್ಣಗೊಳಿಸಿ ಮೇಲ್ಕಂಡ ಕಲಂಗಳ ಅಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಆರೋಪಿಗಳು ತಮ್ಮ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನನ್ನು ಪಡೆದುಕೊಂಡಿರುತ್ತಾರೆ.

**4.** ಆರೋಪಿಗಳಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ನಕಲನ್ನು ಹಾಗೂ ಇತರೆ ದಾಖಲಾತಿಗಳನ್ನು ಪೂರೈಸಲಾಯಿತು. ಆಪಾದನೆಯನ್ನು ರಚಿಸುವ ಪೂರ್ವದಲ್ಲಿ ವಕೀಲರ ಮತ್ತು ಸಹಾಯಕ ಸರ್ಕಾರಿ ಅಭಿಯೋಜಕರವರ ವಾದ ಕೇಳಿ ಆಪಾದನೆಯನ್ನು ಕಲಂ.504, 324, 323, 506 ಸಹವಾಚಕ 34 ರಡಿಯಲ್ಲಿ ರಚಿಸಲಾಯಿತು. ಅದನ್ನು ಆರೋಪಿಗಳಿಗೆ ಓದಿ ಹೇಳಲಾಯಿತು. ಆರೋಪಿಗಳು ತಮ್ಮ ವಿರುದ್ಧ ಹೊರಿಸಿರುವ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ವಿಚಾರಣೆಯಾಗಬೇಕೆಂದು ಕೋರಿರುತ್ತಾರೆ.

**5.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಋಜುವಾತುಪಡಿಸಲು ಅವಕಾಶ ನೀಡಲಾಗಿ ಅಭಿಯೋಜಕರು ತಮ್ಮ ಪರವಾಗಿ ಆರೋಪಿಗಳ ವಿರುದ್ಧ ಆಪಾದನೆಯನ್ನು

ಸಾಬೀತುಪಡಿಸುವ ಉದ್ದೇಶದಿಂದ ಫ್ರಾಸಾ 1 ರಿಂದ 8 ರವರನ್ನು ವಿಚಾರಣೆಗೆ ಒಳಪಡಿಸಿದ್ದು, ನಿಪಿ 1 ರಿಂದ 4 ದಾಖಲಾತಿಗಳನ್ನು ಹಾಗೂ ಮು.ಮಾ.1ನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

6. ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆ ಮುಗಿದ ಬಳಿಕ ಆರೋಪಿಗಳಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ವಿರುದ್ಧ ಕಂಡುಬರುವ ಸಾಕ್ಷಿ ವಿಚಾರಣೆ ಅಂಶಗಳನ್ನು ಓದಿ ಹೇಳಲಾಗಿ, ಆರೋಪಿಗಳು ತಮ್ಮ ವಿರುದ್ಧದ ಸಾಕ್ಷ್ಯಾಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ತಮ್ಮ ಪರವಾಗಿ ಯಾವುದೇ ಸಾಕ್ಷ್ಯವಿರುವುದಿಲ್ಲವೆಂದು ನುಡಿದಿರುತ್ತಾರೆ.

7. ಎರಡು ಕಡೆಯ ವಾದವನ್ನು ಆಲಿಸಲಾಯಿತು.

**8. ಪ್ರಸ್ತುತ ಪ್ರಕರಣದಲ್ಲಿ ಈ ಕೆಳಕಂಡ ಅಂಶಗಳು ಪರಿಗಣನೆಗೆ ಕಂಡುಬಂದಿರುತ್ತವೆ ಅವುಗಳೆನೆಂದರೆಃ–**

1. ದಿನಾಂಕ 07.03.2017ರಂದು ಬೆಳಿಗ್ಗೆ 11.45 ಗಂಟೆ ಸಮಯದಲ್ಲಿ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಬಿಸಲವಾಡಿ ಗ್ರಾಮದ ಎಲ್ಲೆಗೆ ಸೇರಿರುವ ಪಿರ್ಯಾದಿಯವರ ತಂದೆ ಸಿದ್ದನಾಯಕರವರ ಬಾಬ್ತು ಸರ್ವೆ ನಂ.260/1ರ ಬಾಬ್ತು ಜಮೀನಿನ ದಕ್ಷಿಣ ದಿಕ್ಕಿನ ಅಂಚಿನಲ್ಲಿರುವ ಟ್ರಾನ್ಸ್ ಫಾರಂ ಲೈಟ್ ಕಂಬದ ಹತ್ತಿರ ಆರೋಪಿಗಳು ಸಮಾನ ಉದ್ದೇಶದಿಂದ ಚಾಸಾ 1 ರವರ ಜಮೀನಿಗೆ ಪ್ರಾಣಿಗಳು ಒಳಗಡೆ ಬರುವುದನ್ನು ನಿಯಂತ್ರಿಸಲು ಹಾಕಿರುವ ತಂತಿ ಹಾಕಿ ನೆಟ್ಟಿರುವ ಗಳುಗಳನ್ನು ಮುರಿದು ಹಾಕುತ್ತಿದ್ದಾಗ, ಚಾಸಾ 1 ರವರು ಏಕೆ ನಮ್ಮ ಜಮೀನಿಗೆ ಹಾಕಿರುವ ಗಳುಗಳನ್ನು ಮುರಿದು ಹಾಕುತ್ತೀರ ಎಂದು ಕೇಳಿದ್ದಕ್ಕೆ 1ನೇ ಆರೋಪಿಯು ಚಾಸಾ 1 ರವರಿಗೆ ನೀನೇನು ಕೇಳುವುದು ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಋಜುವಾತುಪಡಿಸುವರೇ?

2. ಮೇಲಿನ ಸ್ಥಳ ದಿನಾಂಕ ಮತ್ತು ಸಮಯದಂದು 1ನೇ ಆರೋಪಿಯು ಚಾಸಾ 1 ರವರನ್ನು ಬಲವಾಗಿ ಕೆಳಗೆ ತಳ್ಳಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಋಜುವಾತುಪಡಿಸುವರೇ?

3. ಮೇಲಿನ ಸ್ಥಳ ದಿನಾಂಕ ಮತ್ತು ಸಮಯದಂದು 2ನೇ ಆರೋಪಿಯು ಗಳುವಿನಿಂದ ಚಾಸಾ 1 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ.324 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಋಜುವಾತುಪಡಿಸುವರೇ?

4. ಮೇಲಿನ ಸ್ಥಳ ದಿನಾಂಕ ಮತ್ತು ಸಮಯದಂದು ಆರೋಪಿಗಳಿಬ್ಬರೂ ಚಾಸಾ 1 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಋಜುವಾತುಪಡಿಸುವರೇ?

5. ಯಾವ ಆದೇಶ?

9. ಈ ಮೇಲ್ಕಂಡ ಅಂಶಗಳಿಗೆ ಈ ಮುಂದೆ ಹೇಳಲಾದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಲಾಗಿದೆಃ-

ಅಂಶ 1 ರಿಂದ 4: **ನಕಾರಾತ್ಮಕವಾಗಿ**

ಅಂಶ 5: ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

10. **ಅಂಶ 1 ರಿಂದ 4**:- ಈ ಅಂಶಗಳು ಒಂದಕ್ಕೊಂದು ಹೊಂದಿಕೊಂಡಿರುವುದರಿಂದ ಮತ್ತು ಪುನರಾವರ್ತವನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಒಟ್ಟಿಗೆ ವಿಮರ್ಶೆಗೆ ತೆಗೆದುಕೊಳ್ಳಲಾಗಿದೆ.

ಅಭಿಯೋಜನೆಯವರು ಆರೋಪಿಗಳ ವಿರುದ್ಧ ಹೊರಿಸಿರುವ ಆಪಾದನೆಯನ್ನು ಸಾಬೀತುಪಡಿಸುವ ಸಲುವಾಗಿ ಪ್ರಾಸಾ 1 ರಿಂದ 8 ರವರನ್ನು ತಮ್ಮ ಪರ ಸಾಕ್ಷಿಗಳಾಗಿ ವಿಚಾರಣೆಗೆ ಒಳಪಡಿಸಿದ್ದು, ನಿಪಿ 1 ರಿಂದ 4ರ ದಾಖಲಾತಿಗಳನ್ನು ಹಾಗೂ ಮು.ಮಾ.1ನ್ನು ತಮ್ಮ ಪರವಾಗಿ ಗುರ್ತಿಸಿಕೊಂಡಿರುತ್ತಾರೆ.

11. ಅಭಿಯೋಜನೆಯವರು ಆರೋಪಿಗಳ ವಿರುದ್ಧ ಆರೋಪಿಸಿರುವ ಅಪಾದನೆಯನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ ಚಾಸಾ 1 ರವರನ್ನು ಫ್ರಾಸಾ 1 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಪಿರ್ಯಾದುದಾರರು ಹಾಗೂ ಮಹಜರ್ ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 07.03.2017 ರಂದು ಬಿಸಲವಾಡಿ ಗ್ರಾಮದ ಬೀರಾಜಿ ಕೆರೆ ಹತ್ತಿರ ಇರುವ ನಮ್ಮ ತಾತನವರ ಜಮೀನಿನಲ್ಲಿ ತಾನು, ಚಾಸಾ 2 ಮತ್ತು 3 ರವರು ಕೆಲಸ ಮಾಡುತ್ತಿದ್ದಾಗ, ಬೆಳಿಗ್ಗೆ 11.45ರ ಸಮಯದಲ್ಲಿ ತಮ್ಮ ಜಮೀನಿಗೆ ದನಕರುಗಳು ನುಗ್ಗಬಾರದು ಎಂದು ನಾವು ಹಾಕಿದ್ದ ತಂತಿ ಬೇಲಿಗಳನ್ನು ಆರೋಪಿಗಳು ಮುರಿದು ಹಾಕುತ್ತಿದ್ದು, ಆಗ ಚಾಸಾ 2 ರವರು ಈ ಬಗ್ಗೆ ಪ್ರಶ್ನಿಸಿದಾಗ ಆರೋಪಿಗಳು ಅವರನ್ನು ಅವಾಚ್ಯ ಶಬ್ದಗಳಿಂದ ಬೈದು, 1ನೇ ಆರೋಪಿ ಚಾಸಾ 2 ರವರನ್ನು ಕೆಳಕ್ಕೆ ತಳ್ಳಿದ್ದು, 2ನೇ ಆರೋಪಿ ಅಲ್ಲೇ ಇದ್ದ ಗಳವನ್ನು ತೆಗೆದುಕೊಂಡು ಚಾಸಾ 2 ರವರ ಮೈಕೈಗೆ ಮತ್ತು ಬಲತೋಳಿಗೆ ಹೊಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ತಾನು, ಚಾಸಾ 3 ಮತ್ತು 4ರವರು ಚಾಸಾ 2 ರವರನ್ನು ಬಿಡಿಸಿದ್ದು, ಆಗ ಆರೋಪಿಗಳು ಈ ದಿನ ನೀವು ಉಳಿದುಕೊಂಡಿದ್ದೀರಾ ಮುಂದೆ ನಿಮ್ಮನ್ನು ಸಾಯಿಸುತ್ತೇವೆ ಎಂದು ಬೆದರಿಕೆ ಹಾಕಿದ್ದು, ನಂತರ ಚಾಸಾ 2 ರವರನ್ನು ಚಾಮರಾಜನಗರದ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದು, ನಂತರ ಈ ಬಗ್ಗೆ ಊರಿನ ಹಿರಿಯರಿಗೆ ತಿಳಿಸಿದ್ದು ಈ ಬಗ್ಗೆ ಊರಿನ ಹಿರಿಯರು ಆರೋಪಿಗಳನ್ನು ಕೇಳಿದಾಗ ಆರೋಪಿಗಳು ನಿಮ್ಮಿಷ್ಟದಂತೆ ಮಾಡಿಕೊಳ್ಳಿ ಎಂದು ಹೇಳಿದ್ದರಿಂದ ನಂತರ ಮರುದಿನ ಪೊಲೀಸರಿಗೆ ದೂರು ನೀಡಿರುತ್ತೇನೆ. ಎಂದು

ನುಡಿದಿರುತ್ತಾರೆ. ದಿನಾಂಕಃ 09.03.2017 ರಂದು ಪೊಲೀಸರು ಸ್ಥಳಕ್ಕೆ ಬಂದಿದ್ದು, ತಾನೇ ಸ್ಥಳ ತೋರಿಸಿದ್ದು, ಪೊಲೀಸರು ತನ್ನ ಸಮಕ್ಷಮ ಸ್ಥಳ ಮಹಜರ್ ಮಾಡಿದ್ದು, ಪೊಲೀಸರು ಮಹಜರ್ ಕಾಲಕ್ಕೆ ಆರೋಪಿಗಳು ಉಪಯೋಗಿಸಿದ ಮರದ ದೊಣ್ಣೆಯನ್ನು ತನ್ನ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

12. ಅಭಿಯೋಜನೆಯವರು ಚಾಸಾ 2 ರವರನ್ನು ಫ್ರಾಸಾ 2 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಗಾಯಾಳುವಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ 7-8 ವರ್ಷಗಳ ಹಿಂದೆ ತಾನು, ಚಾಸಾ 1 ಮತ್ತು 3 ರವರು ಜಮೀನಿನಲ್ಲಿದ್ದಾಗ ಸುಮಾರು ಬೆಳಿಗ್ಗೆ 11 ರ ಸಮಯದಲ್ಲಿ ಅಲ್ಲಿಗೆ ಆರೋಪಿಗಳು ಬಂದು ನಮ್ಮ ಜಮೀನಿಗೆ ನೆಟ್ಟಿದ್ದ ಗಳಗಳನ್ನು ಮುರಿದು ಹಾಕಿದ್ದು, ತಾನು ಗಳುಗಳನ್ನು ಮುರಿಯಬೇಡಿ ಎಂದು ಹೇಳಿದ್ದಕ್ಕೆ ನೀವು ಇದು ನಮ್ಮದೇ ಜಮೀನು ನಾವು ಮುರಿದು ಹಾಕುತ್ತೇವೆ ಎಂದು ಹೇಳಿ ತನ್ನನ್ನು ಕೆಳಕ್ಕೆ ತಳ್ಳಿರುತ್ತಾರೆ ಎಂದು ನುಡಿದಿರುತ್ತಾರೆ. ನಂತರ ಅಲ್ಲಿಯೇ ಬಿದ್ದಿದ್ದ ದೊಣ್ಣೆಯಿಂದ 2ನೇ ಆರೋಪಿ ತನ್ನ ಬಲಭುಜಕ್ಕೆ ಹಾಗೂ ಮೈಕೈಗೆ ಹೊಡೆದಿದ್ದು, ಅಷ್ಟಕ್ಕೆ ಚಾಸಾ 1, 3 ಮತ್ತು 4ರವರು ಬಂದು ಜಗಳ ಬಿಡಿಸಿದ್ದು, ನೀವು ಹೀಗೆ ಆಡಿದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂಬುದಾಗಿ ಆರೋಪಿಗಳು ತಮಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ತನ್ನನ್ನು ಚಾಸಾ 1 ಮತ್ತು 3ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದು, ಅನಂತರ ಈ ವಿಚಾರವನ್ನು ಗ್ರಾಮದಲ್ಲಿ ಹಿರಿಯರಿಗೆ ಹೇಳಿದ್ದು, ನಂತರ ಗ್ರಾಮದಲ್ಲಿ ತೀರ್ಮಾನ ಆಗದ ಕಾರಣ ನಂತರ ಚಾಸಾ1ರವರು ಪೊಲೀಸರಿಗೆ ದೂರು ನೀಡಿದ್ದು, ಪೊಲೀಸರಿಗೆ ತಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ.

13. ಅಭಿಯೋಜನೆಯವರು ಚಾಸಾ 3 ರವರನ್ನು ಫ್ರಾಸಾ 3 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಗಳಿಗೂ ನಮಗೂ ಜಮೀನಿನ ವಿಚಾರವಾಗಿ ತಕರಾರು ಇದ್ದು, ತಮ್ಮ ಜಮೀನಿನ

ಬೆಳೆಗಳ ರಕ್ಷಣೆಗಾಗಿ ಬದುವಿನ ಮೇಲೆ ಗಳುಗಳನ್ನು ನೆಟ್ಟು ತಂತಿ ಕಟ್ಟಿಕೊಂಡಿದ್ದೆವು. ದಿನಾಂಕಃ 07.03.2017 ರಂದು ತಾನು, ಚಾಸಾ1 ಮತ್ತು 2ರವರು ನಮ್ಮ ಜಮೀನಿನಲ್ಲಿ ಇದ್ದಾಗ ಸುಮಾರು ಬೆಳಿಗ್ಗೆ 11.45 ರ ಸಮಯದಲ್ಲಿ ಅಲ್ಲಿಗೆ ನೀವು ಬಂದು ತಮ್ಮ ಜಮೀನಿಗೆ ನೆಟ್ಟಿದ್ದ ಗಳಗಳನ್ನು ಮುರಿದು ಹಾಕಿದ್ದು, ಆಗ ಚಾಸಾ2ರವರು ಗಳುಗಳನ್ನು ಏಕೆ ಮುರಿಯುತ್ತೀರಿ ಎಂದು ಕೇಳಿದ್ದಕ್ಕೆ 1ನೇ ಆರೋಪಿಯು ಚಾಸಾ2ರವರನ್ನು ಕುರಿತು ಬೋಳಿಮಗಳೇ ಇದು ನಮ್ಮದೇ ಜಮೀನು ಎಂದು ಗಳಗಳನ್ನು ಮುರಿದು ಹಾಕಲು ಮುಂದುವರಿದಿದ್ದು, ಆಗ ಚಾಸಾ2ರವರು ತಡೆಯಲು ಹೋದಾಗ 1ನೇ ಆರೋಪಿ ಚಾಸಾ2ರವರನ್ನು ಕೆಳಕ್ಕೆ ತಳ್ಳಿದ್ದು, ನಂತರ 2ನೇ ಆರೋಪಿಯು ಅಲ್ಲಿಯೇ ಬಿದ್ದಿದ್ದ ಮರದ ದೊಣ್ಣೆಯಿಂದ ಚಾಸಾ2ರವರ ಬಲಭುಜಕ್ಕೆ ಹಾಗೂ ಮೈಕೈಗೆ ಹೊಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಅಷ್ಟಕ್ಕೆ ತಾನು, ಚಾಸಾ1 ಮತ್ತು 4ರವರು ಬಂದು ಜಗಳ ಬಿಡಿಸಿದ್ದು, ನಂತರ ಆರೋಪಿಗಳು ಈ ದಿನ ಬದುಕಿದ್ದೀರಿ, ಇನ್ನೊಮ್ಮೆ ಜಮೀನಿನ ವಿಚಾರಕ್ಕೆ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂಬುದಾಗಿ ಆರೋಪಿಗಳು ತಮಗೆ ಕೊಲೆ ಬೆದರಿಕೆ ಹಾಕಿದ್ದು, ನಂತರ ಚಾಸಾ2ರವರನ್ನು ಚಾಸಾ1 ರವರು ಚಾಮರಾಜನಗರ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ, ಅನಂತರ ಈ ವಿಚಾರವನ್ನು ಗ್ರಾಮದಲ್ಲಿ ಹಿರಿಯರಿಗೆ ಹೇಳಿದ್ದು, ನಂತರ ಗ್ರಾಮದಲ್ಲಿ ತೀರ್ಮಾನ ಆಗದ ಕಾರಣ ನಂತರ ಚಾಸಾ1ರವರು ಪೊಲೀಸರಿಗೆ ದೂರು ನೀಡಿದ್ದು, ಪೊಲೀಸರಿಗೆ ತಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ.

**14.** ಅಭಿಯೋಜನೆಯವರು ಚಾಸಾ **4** ರವರನ್ನು ಫ್ರಾಸಾ **4** ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ 3-4 ವರ್ಷಗಳ ಹಿಂದೆ ಚಾಸಾ2ರವರ ಜಮೀನಿನ ಪಕ್ಕದಲ್ಲಿ ತನ್ನ ಬಾಬ್ತು ಕುರಿಮರಿಗಳನ್ನು ಮೇಯಿಸುತ್ತಿದ್ದಾಗ ಬೆಳಿಗ್ಗೆ ಸುಮಾರು 11 ಗಂಟೆ ಸಮಯದಲ್ಲಿ ಚಾಸಾ2ರವರ ಜಮೀನಿನಲ್ಲಿ ಕೂಗಾಟದ ಶಬ್ದ ಕೇಳಿ ಬಂತು, ಆಗ ತಾನು ಅಲ್ಲಿಗೆ ಹೋಗಿ ನೋಡಿದಾಗ 1ನೇ ಆರೋಪಿಯು

ಜಮೀನಿಗೆ ನೆಟ್ಟಿದ್ದ ಗಳುಗಳನ್ನು ಮುರಿದು ಹಾಕುತ್ತಿದ್ದು, ಆಗ ಚಾಸಾ2ರವರು ಗಳುಗಳನ್ನು ಏಕೆ ಮುರಿಯುತ್ತೀರಿ ಎಂದು ಕೇಳಿದಾಗ 1ನೇ ಆರೋಪಿಯು ಚಾಸಾ2ರವರನ್ನು ತಳ್ಳಿ , 1ನೇ ಆರೋಪಿ ಚಾಸಾ2ರವರನ್ನು ಕುರಿತು ಜಮೀನು ನಿಮಗೆ ಇಲ್ಲಿಯವರೆಗೆ ಬರಬೇಕೆ ಬೋಳಿಮಗಳೇ ಎಂದು ಬೈಯ್ದಿರುತ್ತಾರೆ ಎಂದು ನುಡಿದಿರುತ್ತಾರೆ. 2ನೇ ಆರೋಪಿಯು ದೊಣ್ಣೆಯಿಂದ ಚಾಸಾ2ರವರಿಗೆ ಬಲಭುಜಕ್ಕೆ ಹಾಗೂ ಮೈಕೈಗೆ ಹೊಡೆದಿದ್ದು, ಅಷ್ಟಕ್ಕೆ ಆರೋಪಿಗಳು ಹೊರಟು ಹೋಗಿರುತ್ತಾರೆ. ನಂತರ ಆರೋಪಿಗಳು ಇನ್ನೊಮ್ಮೆ ಜಮೀನಿನ ವಿಚಾರಕ್ಕೆ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂಬುದಾಗಿ ಚಾಸಾ2ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಈ ಬಗ್ಗೆ ತಾನು ಪೊಲೀಸರಿಗೆ ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ.

15. ಅಭಿಯೋಜನೆಯವರು ಚಾಸಾ 7 ರವರನ್ನು ಪ್ರಾಸಾ 5 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 07.03.2017 ರಂದು ಮಧ್ಯಾಹ್ನ 12.30 ರ ಸಮಯದಲ್ಲಿ ಚಾಸಾ2 ರವರು ಹಲ್ಲೆಯ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು, ಚಾಸಾ2 ರವರನ್ನು ಪರೀಕ್ಷಿಸಿದಾಗ 1. 4x3 ಸೆಂ.ಮೀ ನಷ್ಟು ಬಲಭುಜದ ಮೇಲೆ ತರಚಿದ ಗಾಯ. 2. 4x11 ಸೆಂ.ಮೀ ನಷ್ಟು ಎಡಭುಜದ ಹಿಂಬಾಗದಲ್ಲಿ ತರಚಿದ ಗಾಯ ಕಂಡು ಬಂದಿದ್ದು, ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳೆಂದು ನಿಪಿಃ 3ರಂತೆ ಗಾಯದ ಪ್ರಮಾಣಪತ್ರವನ್ನು ನೀಡಿದ್ದು, ನಿಪಿಃ3 ರಲ್ಲಿ ತಿಳಿಸಿರುವ ಗಾಯಗಳು ವ್ಯಕ್ತಿಯನ್ನು ತಳ್ಳಿ ಹಲ್ಲೆ ಮಾಡಿದರೆ ಆಗಬಹುದು ಎಂದು ನುಡಿದಿರುತ್ತಾರೆ.

16. ಅಭಿಯೋಜನೆಯವರು ಚಾಸಾ 8 ರವರನ್ನು ಪ್ರಾಸಾ 6 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ದಿಃ 08.03.2017 ರಂದು ಠಾಣಾ ಉಸ್ತು ವಾರಿಯಲ್ಲಿದ್ದಾಗ ಮದ್ಯಾಹ್ನ 12.30 ಗಂಟೆಗೆ ಚಾಸಾ 1 ರವರು ನೀಡಿದ ಲಿಖಿತ ದೂರನ್ನು ನೀಡಿದ್ದು, ಅದರ ಆಧಾರದಲ್ಲಿ ಮೊಕದ್ದಮೆ ಸಂಖ್ಯೆ 60/2017ರಂತೆ ಪ್ರಕರಣ

ದಾಖಲಿಸಿ, ಪ್ರ.ವ.ವರದಿಯನ್ನು ಘನ ನ್ಯಾಯಾಲಯಕ್ಕೆ ಹಾಗೂ ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿ, ದಿಃ 09.03.2017 ರಂದು ಮಧ್ಯಾಹ್ನ 2.00 ರಿಂದ 3.00 ರವರೆಗೆ ಸ್ಥಳದಲ್ಲಿ ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ 5 ಮತ್ತು 6 ರವರ ಸಮಕ್ಷಮ ನಿಪಿ 2 ರಂತೆ ಮಹಜರ್ ಮಾಡಿ, ಮು.ಮಾ.1ನ್ನು ಅಮಾನತ್ತು ಪಡಿಸಿಕೊಂಡು ಚಾಸಾ 2 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡು, ನ್ಯಾಯಾಲಯಕ್ಕೆ ಮಾಲು ಪಟ್ಟಿಯನ್ನು ನಿವೇದಿಸಿಕೊಂಡು, ಈ ಪ್ರಕರಣದ ಕಡತವನ್ನು ತನಿಖೆಗಾಗಿ ಚಾಸಾ 9 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ನುಡಿದಿರುತ್ತಾರೆ.

17. ಅಭಿಯೋಜನೆಯವರು ಚಾಸಾ 9 ರವರನ್ನು ಫ್ರಾಸಾ 7 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 10.06.2020 ರಂದು ಚಾಸಾ 12 ರವರಿಂದ ಕಡತ ಪಡೆದುಕೊಂಡು, ಅವರು ದೋಷಾರೋಪಣ ಪಟ್ಟಿ ತಯಾರಿಸಿದ್ದನ್ನು ಪರಿಶೀಲಿಸಿ ಅನುಮೋದಿಸಿ, ಚಾಸಾ 12 ರವರು ಈಗ ಮೃತರಾಗಿದ್ದು, ಅವರು ತನ್ನೊಂದಿಗೆ ಕರ್ತವ್ಯ ನಿರ್ವಹಿಸಿದ್ದರಿಂದ ಅವರ ಸಹಿಯನ್ನು ತಾನು ಗುರುತಿಸಿ, ಚಾಸಾ 12 ರವರು ತನಿಖೆ ಕೈಗೊಂಡಿದ್ದು ಆರೋಪ ಸಾಬೀತಾದ್ದರಿಂದ ಅವರು ದೋಷಾರೋಪಣ ಪಟ್ಟಿ ಸಲ್ಲಿಸಿದ್ದು, ತಾನು ಸದರಿ ದೋಷಾರೋಪಣ ಪಟ್ಟಿಯನ್ನು ಅನುಮೋದಿಸಿರುತ್ತೇನೆ ಎಂದು ನುಡಿದಿರುತ್ತಾರೆ.

18. ಅಭಿಯೋಜನೆಯವರು ಚಾಸಾ 6 ರವರನ್ನು ಫ್ರಾಸಾ 8 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ 2 ಸ್ಥಳ ಮಹಜರ್ ಗೆ ಪೊಲೀಸರ ಕೋರಿಕೆ ಮೇರೆಗೆ ಸುಮಾರು 8-9 ವರ್ಷಗಳ ಹಿಂದೆ ತಾನು ಮತ್ತು ತನ್ನ ತಮ್ಮ ಊರಿನಲ್ಲಿ ಸಹಿ ಮಾಡಿದ್ದು, ಅದರಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ, ಪೊಲೀಸರು ತನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ ಮತ್ತು ತನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಮಾಡಿಕೊಂಡಿಲ್ಲ, ಮು.ಮಾ.1ನ್ನು ಈ ಹಿಂದೆ ನೋಡಿರುವುದಿಲ್ಲ

ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿಯವರನ್ನು ಪಾಟಿ ಸವಾಲಿಗೆ ಒಳಪಡಿಸಿದರೂ ಕೂಡ ನಿಪಿ 2ಕ್ಕೆ ಪೂರಕವಾದ ಸಾಕ್ಷ್ಯವನ್ನು ಹೊರತಂದಿರುವುದಿಲ್ಲ.

19. ಈ ಪ್ರಕರಣದಲ್ಲಿ ನಿಪಿ 1 ದೂರಾಗಿದ್ದು, ಫ್ರಾಸಾ 1 ರವರು ನೀಡಿರುತ್ತಾರೆ. ಫ್ರಾಸಾ 2 ರವರಿಗೆ ಆರೋಪಿಗಳಿಬ್ಬರು ಅವಾಚ್ಯವಾಗಿ ಬೈದು, ಹಲ್ಲೆ ಮಾಡಿ, ಕೊಲೆ ಬೆದರಿಕೆ ಹಾಕಿರುವುದಾಗಿರುತ್ತದೆ. ನಿಪಿ 1ನ್ನು ಪರಿಶೀಲಿಸಿದಾಗ ಆರೋಪಿಗಳು ಮತ್ತು ಫ್ರಾಸಾ 1 ರಿಂದ 3 ರವರು ಒಂದೇ ಕುಟುಂಬದವರಾಗಿದ್ದು, ಅವರ ನಡುವೆ ಜಮೀನಿನ ವಿಚಾರದಲ್ಲಿ ವ್ಯಾಜ್ಯವಿರುವುದು ಕಂಡು ಬರುತ್ತದೆ. ಆ ದಿನ ಫ್ರಾಸಾ 1 ರಿಂದ 3 ರವರು ಜಮೀನಿನಲ್ಲಿದ್ದಾಗ ಆರೋಪಿಗಳು ಜಮೀನಿಗೆ ಅಳವಡಿಸಿದ ತಂತಿಗೆ ಇರುವ ಗಳಗಳನ್ನು ಮುರಿದು ಹಾಕುತ್ತಿರುವಾಗ ಫ್ರಾಸಾ 2 ರವರು ವಿಚಾರಿಸಿದ್ದರಿಂದ ಆರೋಪಿಗಳು ಅವಾಚ್ಯವಾಗಿ ಬೈದು, ಫ್ರಾಸಾ 2 ರವರಿಗೆ ಹಲ್ಲೆ ಮಾಡಿರುವುದಾಗಿರುತ್ತದೆ ಎಂಬುದಾಗಿರುತ್ತದೆ. ಫ್ರಾಸಾ 1 ರವರು ತಮ್ಮ ಸಾಕ್ಷ್ಯದಲ್ಲಿ ಬೆಳಿಗ್ಗೆ 11.45 ಗಂಟೆಗೆ ಆರೋಪಿಗಳಿಬ್ಬರೂ ಗಳ ಮುರಿಯುತ್ತಿರುವಾಗ ಫ್ರಾಸಾ 2 ರವರು ವಿಚಾರಿಸಿದ್ದು, 1ನೇ ಆರೋಪಿ ಫ್ರಾಸಾ 2 ರವರನ್ನು ಕೆಳಕ್ಕೆ ತಳ್ಳಿದ್ದು, 2ನೇ ಆರೋಪಿ ಗಳದಿಂದ ಹೊಡೆದಿರುತ್ತಾನೆ ಎಂದು ನುಡಿದಿರುತ್ತಾರೆ. ಫ್ರಾಸಾ 2 ತನ್ನ ಮುಖ್ಯ ವಿಚಾರಣೆಯಲ್ಲಿ 1 ಮತ್ತು 2ನೇ ಆರೋಪಿಗಳು ತನ್ನನ್ನು ಕೆಳಕ್ಕೆ ತಳ್ಳಿದ್ದು, 2ನೇ ಆರೋಪಿ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾನೆ ಎಂದು ನುಡಿದಿರುತ್ತಾರೆ. ಫ್ರಾಸಾ 3, 1ನೇ ಆರೋಪಿ ಫ್ರಾಸಾ 2 ರವರನ್ನು ಕೆಳಕ್ಕೆ ತಳ್ಳಿದಾಗ, 2ನೇ ಆರೋಪಿ ಮರದ ದೊಣ್ಣೆಯಿಂದ ಚಾಸಾ 2 ರವರ ಬಲಭುಜಕ್ಕೆ ಮತ್ತು ಮೈಕೈಗೆ ಹೊಡೆದಿರುತ್ತಾನೆ ಎಂದು ನುಡಿದಿರುತ್ತಾರೆ. ನಿಪಿ 1 ರಲ್ಲಿ ಫ್ರಾಸಾ 4 ರವರು ಜಗಳ ಬಿಡಿಸಿದರು ಎಂದು ಹೇಳಲಾಗಿದ್ದು, ಫ್ರಾಸಾ 4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಫ್ರಾಸಾ 2 ರವರು ಮಾತ್ರ ಜಮೀನಿನಲ್ಲಿದ್ದು, ಶಬ್ದ ಕೇಳಿ ತಾನು ಹೋಗಿ ನೋಡಿದಾಗ 1ನೇ ಆರೋಪಿಗಳ ಮುರಿಯುತ್ತಿದ್ದು, ಫ್ರಾಸಾ 2 ವಿಚಾರಿಸಿದಾಗ ಆತನು ಆಕೆಯನ್ನು ತಳ್ಳಿದ್ದು, 2ನೇ ಆರೋಪಿ

ದೊಣ್ಣೆಯಿಂದ ಹೊಡೆದನು ಎಂದು ನುಡಿದಿರುತ್ತಾರೆ. ತನ್ನ ಪಾಟಿ ಸವಾಲಿನಲ್ಲಿ ಗಲಾಟೆಯಾದ 1 ಗಂಟೆಯ ನಂತರ ಫ್ರಾಸಾ 1 ಮತ್ತು 3 ರವರು ಸ್ಥಳಕ್ಕೆ ಬಂದಿರುತ್ತಾರೆ ಎಂದು ಮತ್ತು ಅವರು ಗಲಾಟೆಯನ್ನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಸಂಗತಿಗಳನ್ನು ನೋಡಿದಾಗ ಫ್ರಾಸಾ 4 ರವರು ಫ್ರಾಸಾ 2 ರವರ ಸಹೋದರನಿದ್ದು, ಈಗಾಗಲೇ ವಿಚಾರಣೆಗೊಂಡಿರುವ ಕ್ರಿಮಿನಲ್ ಪ್ರಕರಣದಲ್ಲಿ ತಾನು ಸಾಕ್ಷ್ಯ ನುಡಿದಿರುವುದನ್ನು ಒಪ್ಪಿಕೊಂಡಿರುತ್ತಾರೆ. ನಿಪಿ 1 ಮತ್ತು ಫ್ರಾಸಾ 4 ರವರ ಸಾಕ್ಷ್ಯವನ್ನು ನೋಡಿದಾಗ, ಘಟನೆ ಸಮಯದಲ್ಲಿ ಫ್ರಾಸಾ 1 ಮತ್ತು 3 ಸ್ಥಳದಲ್ಲಿ ಇರುವ ಬಗ್ಗೆ ಅನುಮಾನವುಂಟಾಗುತ್ತದೆ. ಅಭಿಯೋಜನೆ ಪ್ರಕರಣದಂತೆ ಅವರಿಬ್ಬರು ಪ್ರತ್ಯಕ್ಷ ದರ್ಶಿಗಳು ಎಂದು ಹೇಳಲಾಗಿದ್ದು, ಸದರಿಯವರ ಸಾಕ್ಷ್ಯದಲ್ಲಿ ವ್ಯತಿರಿಕ್ತತೆಯಿರುವುದರಿಂದ ಮತ್ತು ಪ್ರತ್ಯಕ್ಷದರ್ಶಿ ಎನ್ನಲಾದ ಫ್ರಾಸಾ 4 ರವರು ಘಟನೆಯ ನಂತರ ಅವರಿಬ್ಬರು ಸ್ಥಳಕ್ಕೆ ಬಂದರು ಎಂದು ಹೇಳಿದ್ದರಿಂದ ಸದರಿಯವರ ಸಾಕ್ಷ್ಯವನ್ನು ಪರಿಗಣಿಸಲು ಬರುವುದಿಲ್ಲ.

20. ಈ ಪ್ರಕರಣದಲ್ಲಿ ಫ್ರಾಸಾ 2 ರವರು ಆ ದಿನ 2ನೇ ಆರೋಪಿ ದೊಣ್ಣೆಯಿಂದ ತನ್ನ ಬಲ ಭುಜಕ್ಕೆ ಮತ್ತು ಮೈಕೈಗೆ ಹೊಡೆದಿದ್ದರು ಎಂದು ಸಾಕ್ಷ್ಯ ನುಡಿದಿದ್ದು, ತನ್ನ ಪಾಟಿ ಸವಾಲಿನಲ್ಲಿ 2 ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಾಗಿ ನುಡಿಯುತ್ತಾರೆ. ಫ್ರಾಸಾ 1 ರವರು ತಾನು ಫ್ರಾಸಾ 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಫ್ರಾಸಾ 3 ರವರು ಫ್ರಾಸಾ 1 ರವರು ಫ್ರಾಸಾ 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ನುಡಿದಿದ್ದು, ತಾನು ಆಸ್ಪತ್ರೆಗೆ ಹೋದ ಬಗ್ಗೆ ಸಾಕ್ಷ್ಯ ನುಡಿದಿರುವುದಿಲ್ಲ. ನಿಪಿ 3 ಗಾಯದ ಪ್ರಮಾಣ ಪತ್ರದಲ್ಲಿ ಫ್ರಾಸಾ 2 ರವರನ್ನು ಫ್ರಾಸಾ 3 ರವರು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು ಎಂದು ಬರೆಯಲಾಗಿರುತ್ತದೆ. ಈ ಕುರಿತು ನಿಪಿ 1ರಲ್ಲಿ ಫ್ರಾಸಾ 1 ತಾನು ಫ್ರಾಸಾ 2 ರವರೊಂದಿಗೆ ಆಸ್ಪತ್ರೆಗೆ ಹೋಗಿರುವುದಾಗಿ ಬರೆದಿರುತ್ತಾರೆ. ನಿಪಿ 4ರಲ್ಲಿ ಗ್ರಾಮದ ಮುಖಂಡರಿಗೆ ವಿಚಾರ ತಿಳಿಸಿ, ತೀರ್ಮಾನಕ್ಕೆ ಬಾರದ ಕಾರಣ ವಿಳಂಬವಾಗಿ ದೂರು ಸಲ್ಲಿಸಲಾಗಿದೆ ಎಂದು ಹೇಳಲಾಗಿದ್ದು,

ಗಾಯಾಳು ಎರಡು ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರೂ ಸಹಾ ಎಂ.ಎಲ್.ಸಿ. ದಾಖಲಾಗದೆಯಿರುವುದು ಕೆಲವು ಅನುಮಾನಗಳನ್ನುಂಟು ಮಾಡುತ್ತದೆ. ಸದರಿ ಘಟನೆಯಾಗಿದೆ ಎಂದು ಪರಿಗಣಿಸಿದರು ಸಹಾ, ಈ ಹಿಂದೆ ಪರಸ್ಪರರ ನಡುವೆ ಇರುವ ಸಿವಿಲ್ ವ್ಯಾಜ್ಯ ಮತ್ತು ಕ್ರಿಮಿನಲ್ ಪ್ರಕರಣಗಳ ಹಿನ್ನಲೆಯಲ್ಲಿ ಈ ಪ್ರಕರಣ ದಾಖಲಾಗಿದ್ದು, ಅಭಿಯೋಜನೆಯು ಆ ದಿನ 1 ಮತ್ತು 2ನೇ ಆರೋಪಿಗಳು ಫ್ರಾಸಾ 2 ರವರಿಗೆ ಮು.ಮಾ.1 ರಿಂದ ಹಲ್ಲೆ ಮಾಡಿರುವುದರ ಬಗ್ಗೆ ನಿರ್ದಿಷ್ಟವಾಗಿ ರುಜುವಾತು ಪಡಿಸಬೇಕಾಗಿರುತ್ತದೆ. ಫ್ರಾಸಾ 1 ರಿಂದ 4ರವರ ಸಾಕ್ಷ್ಯ ವಿಚಾರಣೆಯನ್ನು ಗಮನಿಸಿದಾಗ ಆ ದಿನ ಜಮೀನಿನಲ್ಲಿ ಜಗಳವಾಗಿರುವುದು ಸಾಬೀತಾಗುತ್ತದೆ. ಆದರೆ ಪ್ರಕರಣದ ವಸ್ತು ಸ್ಥಿತಿಯನ್ನು ಗಮನಿಸಿದಾಗ ಜಮೀನಿನಲ್ಲಿ ಗಳಗಳಿಗೆ ಹಾಕಿದ ತಂತಿಯನ್ನು ಆರೋಪಿಗಳು ತೆಗೆಯುತ್ತಿದ್ದಾಗ ಜಗಳವಾಗಿರುವುದು ಕಂಡು ಬರುತ್ತದೆ. ನಿಪಿ 2 ಸ್ಥಳ ಮಹಜರ್ ನಲ್ಲಿ ಬಿಸಲವಾಡಿ ಗ್ರಾಮದ ಸರ್ವೆ ನಂ.260/1ರ ಸಿದ್ದನಾಯಕ ಬಿನ್ ಕತ್ತಿನಾಯಕ ಬಾಬ್ತು ಜಮೀನಿನ ದಕ್ಷಿಣ ದಿಕ್ಕಿನ ಅಂಚಿನಲ್ಲಿರುವ ಟ್ರಾನ್ಸ್ ಫಾರ್ಮ್ ಕಂಬದ ಹತ್ತಿರ ಎಂದು ಘಟನಾ ಸ್ಥಳವನ್ನು ಕಾಣಿಸಲಾಗಿರುತ್ತದೆ. ಕೃತ್ಯ ಸ್ಥಳದ ಚೆಕ್ಕುಬಂಧಿಯಲ್ಲಿ ಪೂರ್ವಕ್ಕೆ ಪುಟ್ಟಮ್ಮ ಕತ್ತಿನಾಯಕರವರ ಜಮೀನು, ಪಶ್ಚಿಮಕ್ಕೆ ಪಿರ್ಯಾದಿಯ ಜಮೀನು, ಉತ್ತರಕ್ಕೆ ಪಿರ್ಯಾದಿ ಮತ್ತು ಅದರಾಚೆ ಆರೋಪಿಗಳ ಜಮೀನು, ದಕ್ಷಿಣಕ್ಕೆ ದರಖಾಸ್ತು ಜಮೀನು ಎಂದು ಕಾಣಿಸಲಾಗಿರುತ್ತದೆ. ಆರೋಪಿಗಳ ತಂದೆ ಮತ್ತು ಫ್ರಾಸಾ 2 ರವರ ಗಂಡ ಅಣ್ಣತಮ್ಮಂದಿರು ಎನ್ನುವ ಬಗ್ಗೆ ಯಾವುದೇ ವಿವಾದವಿರುವುದಿಲ್ಲ. ಸದರಿ ಸರ್ವೆ ನಂಬರ್ ನಲ್ಲಿನ ಜಮೀನು ಅವರ ಪೂರ್ವಜರ ಜಮೀನು ಎಂಬುದರ ಬಗ್ಗೆ ವಿವಾದವಿರುವುದಿಲ್ಲ. ಆದರೆ ಈ ಪ್ರಕರಣದಲ್ಲಿ ಫ್ರಾಸಾ 1 ರಿಂದ 3 ರವರು ಯಾವ ದಿನದಂದು ಜಮೀನಿಗೆ ತಂತಿ ಬೇಲಿ ಅಳವಡಿಸಿಕೊಂಡಿದ್ದರು ಎನ್ನುವ ಕುರಿತು ಉಲ್ಲೇಖ ಇರುವುದಿಲ್ಲ. ಒಂದು ವೇಳೆ ಇತ್ತೀಚೆಗೆ ತಂತಿ ಬೇಲಿ ಅಳವಡಿಸಲ್ಪಟ್ಟಿದ್ದರೆ ಆ ಕುರಿತು ಆರೋಪಿಗಳು ತಮ್ಮ ಹಕ್ಕೊತ್ತಾಯ ಮಾಡಿರುವ ಸಂಭವನೀಯತೆ ಇರುತ್ತದೆ. ಸದರಿ

ತಂತಿ ಬೇಲಿ ಯಾರ ಜಮೀನಿನಲ್ಲಿತ್ತು ಮತ್ತು ಆರೋಪಿಗಳು ಅದನ್ನು ಧ್ವಂಸಗೊಳಿಸಿರುತ್ತಾರೆ ಎನ್ನುವ ಕುರಿತು ಯಾವುದೇ ತನಿಖೆಯಾಗಿರುವುದಿಲ್ಲ. ಆದ್ದರಿಂದ ಆರೋಪಿಗಳು ಸ್ವ-ಇಚ್ಛೆಯಿಂದ ಜಗಳ ತೆಗೆದು ಫ್ರಾಸಾ 2 ರವರಿಗೆ ಅಪರಾಧಿಕ ಮನೋಭಾವದಿಂದ ಹಲ್ಲೆ ಮಾಡಿರುತ್ತಾರೆ ಎಂಬುದು ಸಾಬೀತಾಗುವುದಿಲ್ಲ.

21. ಆರೋಪಿಗಳು ಮತ್ತು ಪಿರ್ಯಾದುದಾರರ ನಡುವೆ ಜಮೀನಿನ ವಿಚಾರವಾಗಿ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದು, ಆ ದಿನ 1 ಮತ್ತು 2ನೇ ಆರೋಪಿಗಳು ಪಿರ್ಯಾದುದಾರರ ಜಮೀನಿನಲ್ಲಿನ ತಂತಿ ಬೇಲಿ ಕಿತ್ತಲು ಹೋದಾಗ ಫ್ರಾಸಾ 2 ಪ್ರಶ್ನೆ ಮಾಡಿದ್ದರಿಂದ ಆರೋಪಿಗಳು ಗಲಾಟೆ ಮಾಡಿ, ಹಲ್ಲೆ ಮಾಡಿರುತ್ತಾರೆ ಎಂದು ಅಭಿಯೋಜನೆ ನಿಸ್ಸಂಶಯವಾಗಿ ಸಾಬೀತುಪಡಿಸಿದಾಗ ಆರೋಪಿಗಳಿಗೆ ಶಿಕ್ಷೆ ನೀಡಬಹುದಾಗಿರುತ್ತದೆ. ಈ ಪ್ರಕರಣದಲ್ಲಿ ಅಭಿಯೋಜನೆ ನೀಡಿದ ಸಾಕ್ಷ್ಯಾಧಾರಗಳಲ್ಲಿ ವ್ಯತಿರಿಕ್ತತೆ ಕಂಡುಬಂದಿರುವುದರಿಂದ ಆರೋಪಿಗಳು ಅಭಿಯೋಜನೆ ಹೇಳಿದಂತೆ ಹಲ್ಲೆ ಮಾಡಿ, ಕೃತ್ಯ ಎಸಗಿರುತ್ತಾರೆ ಎನ್ನುವ ಕುರಿತು ಅನುಮಾನುವುಂಟಾಗುತ್ತದೆ. ಈ ಪ್ರಕರಣವನ್ನು ನಿಸ್ಸಂಶಯವಾಗಿ ರುಜುವಾತು ಮಾಡುವ ಹೊಣೆಗಾರಿಕೆ ಅಭಿಯೋಜನೆ ಮೇಲೆ ಇದ್ದು, ಅಭಿಯೋಜನೆ ಆರೋಪ ಸಾಬೀತುಪಡಿಸುವಲ್ಲಿ ವಿಫಲವಾಗಿದ್ದರಿಂದ ಅನುಮಾನದ ಲಾಭವನ್ನು ಆರೋಪಿಗಳಿಗೆ ನೀಡಿ ಅಂಶ 1 ರಿಂದ 4 ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

22. **ಅಂಶ ಸಂಖ್ಯೆ 5**: ಈ ಮೇಲೆ ಹೇಳಿರುವ ಕಾರಣಗಳಿಗಾಗಿ ತಲುಪಿರುವ ತೀರ್ಮಾನ ಮತ್ತು ಅಭಿಪ್ರಾಯಗಳಿಗೆ ಅನುಗುಣವಾಗಿ ಈ ಕೆಳಕಂಡಂತೆ ಆದೇಶಿಸಿದೆ.

## ಃಆದೇಶಃ

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ 1 ಮತ್ತು 2ನೇ ಆರೋಪಿಗಳ ವಿರುದ್ಧ ಭಾರತೀಯ

ದಂಡ ಸಂಹಿತೆ ಕಲಂ.504, 324, 323, 506 ಸಹವಾಚಕ 34 ರಡಿಯಲ್ಲಿ ಹೊರಿಸಿರುವ ಆಪಾದನೆಗಳಿಂದ ಸದರಿ ಆರೋಪಿಗಳನ್ನು ದೋಷಮುಕ್ತರೆಂದು ಘೋಷಿಸಿ ಬಿಡುಗಡೆ ಮಾಡಲಾಗಿದೆ.

1 ಮತ್ತು 2ನೇ ಆರೋಪಿಗಳು ಹಾಗೂ ಅವರ ಜಾಮೀನುದಾರರು ದಂ.ಪ್ರ.ಸಂ.ಕಲಂ 437–ಎ ರಲ್ಲಿ ಬರೆದುಕೊಟ್ಟ ಜಾಮೀನು ಭದ್ರತೆಯು 6 ತಿಂಗಳವರೆಗೆ ಜಾರಿ ಇರತಕ್ಕದ್ದು.

ಈ ಪ್ರಕರಣದ ಪಿ.ಎಫ್.ನಂ.**33/2017** (ಪಿ.ಆರ್.**83/2018**) ರಡಿಯಲ್ಲಿ ವಶಪಡಿಸಿಕೊಳ್ಳಲಾದ ಮು.ಮಾ.1 (ದೊಣ್ಣೆ)ನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮುಖಾಂತರ ಬೆರಳಚ್ಚು ಪಡಿಸಿದ್ದು, ನಂತರ ತಪ್ಪುಗಳನ್ನು ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕಃ **20ನೇ ಆಗಸ್ಟ್ 2026** ರಂದು ಓದಲಾಯಿತು.)

**(ಸ್ಮಿತಾ ನಾಗಲಾಪೂರ )**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,**
**ಚಾಮರಾಜನಗರ.**

## ಅನುಬಂಧ

**ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿಃ**

| | | |
|---|---|---|
| ಫ್ರಾಸಾ 1 | : | ನಂಜುಂಡಸ್ವಾಮಿ |
| ಫ್ರಾಸಾ 2 | : | ಬಸಮ್ಮಣ್ಣಿ |
| ಫ್ರಾಸಾ 3 | : | ಸಿದ್ದರಾಜು |
| ಫ್ರಾಸಾ 4 | : | ನಾಗೇಶ ನಾಯಕ |
| ಫ್ರಾಸಾ 5 | : | ಡಾ.ಮುರುಗೇಶ್ |
| ಫ್ರಾಸಾ 6 | : | ಕೂಸಪ್ಪ |
| ಫ್ರಾಸಾ 7 | : | ಲೋಹಿತ್ ಕುಮಾರ್.ಎಂ.ಕೆ. |
| ಫ್ರಾಸಾ 8 | : | ಸಿದ್ದನಾಯಕ |

**ಅಭಿಯೋಜನೆಯ ಪರ ಗುರುತಿಸಿದ ದಾಖಲಾತಿಗಳ ಪಟ್ಟಿ**

| | | |
|---|---|---|
| ನಿಪಿಃ1 | : | ದೂರು |
| ನಿಪಿಃ1(ಎ) | : | ಫ್ರಾಸಾ 1 ರವರ ಸಹಿ |

| | | |
|---|---|---|
| ನಿಪಿಃ2 | : | ಸ್ಥಳ ಮಹಜರ್ |
| ನಿಪಿಃ2(ಎ) | : | ಫ್ರಾಸಾ 1 ರವರ ಸಹಿ |
| ನಿಪಿಃ2(ಬಿ) | : | ಚಾಸಾ 5 ರವರ ಸಹಿ |
| ನಿಪಿಃ3 | : | ಗಾಯದ ಪ್ರಮಾಣ ಪತ್ರ |
| ನಿಪಿಃ3(ಎ) | : | ಫ್ರಾಸಾ 5 ರವರ ಸಹಿ |
| ನಿಪಿಃ3(ಬಿ) | : | ಫ್ರಾಸಾ 7 ರವರ ಸಹಿ |
| ನಿಪಿಃ4 | : | ಪ್ರಥಮ ವರ್ತಮಾನ ವರದಿ |
| ನಿಪಿಃ4(ಎ) | : | ಫ್ರಾಸಾ 7 ರವರ ಸಹಿ |

**ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿಗಳುಃ**

–ಇಲ್ಲ –

**ಆರೋಪಿಗಳ ಪರ ಗುರುತಿಸಿದ ದಾಖಲೆಗಳುಃ**

–ಇಲ್ಲ–

**ಅಭಿಯೋಜನೆಯ ಪರ ಗುರುತಿಸಿದ ಮುದ್ದೆ ಮಾಲುಗಳುಃ**

ಮು.ಮಾ.1 : ದೊಣ್ಣೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,
ಚಾಮರಾಜನಗರ.

Visit **ecourts.gov.in** for updates or download mobile app “**eCourts Services**” from Android or iOS